**(ದಿನಾಂಕಃ 30-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ವಾಟೀಸವಾಲು : ವಾದಿ ಪರ ಶ್ರೀ ಎಸ್ ಕೆ ಎಚ್ ವಕೀಲರಿಂದ -**

ನಾನು ಶಾಲೆ ಕಲಿತಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತನೆ. ಮುತ್ಯಪ್ಪ ನ ತಂದೆಯ ಹೆಸರು ನಾಗಪ್ಪ ಎಂದರೆ ನಿಜ. ಆತನು ತೀರಿಕೊಂಡಿದ್ದಾನೆ ಎಂದರೆ ನಿಜ. ನಾಗಪ್ಪನ ಹೆಂಡತಿ ಹೆಸರು ತಿಪ್ಪವ್ವ ಎಂದರೆ ನಿಜ. ಆಕೆ ತೀರಿಕೊಂಡಿದ್ದಾಳೆ ಎಂದರೆ ನಿಜ. ನಾಗಪ್ಪ ಮತ್ತು ತಿಪ್ಪವ್ವ ರಿಗೆ 5 ಜನ ಮಕ್ಕಳು ಎಂದರು ನಿಜ. ಲಗಮಪ್ಪ ಮತ್ತು ಮುತ್ಯಪ್ಪ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಕೆಂಪವ್ವ, ಯಲ್ಲವ್ವಾ , ಅವಕ್ಕಾ ಎಂಬಮೂರು ಜನ ಹೆಣ್ಣು ಮಕ್ಕಳು ಎಂದರೆ ನಿಜ. ಕೆಂಪವ್ವ ನ ಗಂಡನ ಹೆಸರು ಅಕ್ಕಪ್ಪ , ಆಕೆಗೆ ಗೋಕಾಕ ತಾಲೂಕಿನ ಕೊಣ್ಣುರಿಗೆ ಮದುವೆ ಮಾಡಿಕೊಟ್ಟಿರತ್ತಾರೆ ಎಂದರೆ ನಿಜ. ಕಂಪವ್ವ ಮಗಳು ವಾದಿ ಲಗಮವ್ವ ಎಂದರೆ ನಿಜ. ಲಗಮವ್ವ ಈಗ ಈ ದಾವೆ ಯಾಕೆ ಮಾಡಿರುತ್ತಾಳೆ ಎಂದು ನನಗೆ ಮಾಹಿತಿ ಇಲ್ಲ. ನನ್ನವಕೀಲರಿಗೆ ದಾವೆಯ ಬಗ್ಗೆ ಕೇಳಿ ತೀಳಿದುಕೊಂಡಿದ್ದೆನೆ. ವಾದಿಯು ಮುತ್ಯಪ್ಪನ ಕಾಯದೆಶೀರ ಹೆಂಡತಿ ಆಗಿರುದ್ದಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ಮುತ್ತಪ್ಪ ನನ್ನನ್ನು ಮದುವೆಯಾಗಿದ್ದಾರೆ ಎಂದ ಹೇಳುತ್ತಾರೆ. ಮುತ್ತಪ್ಪ ದಿಃ 30-03-2017 ರಂದು ಜಾಂಗಟಿಹಾಳ ಗ್ರಾಮದಲ್ಲಿ ತೀರಿಕೊಂಡಿದ್ದಾನೆ ಎಂದರೆ ನಿಜ.

ವಾದಿಯು ಹಾಜರುಮಾಡಿದ ದಾಖಲೆಗಳನ್ನು ತಿಳಿದಕೊಂಡಿದ್ದೆನೆ. ಮುತ್ತಪ್ಪನ ಹೆಸರು ಜಾಂಗಟಿಹಾಳ ಗ್ರಾಮದ ಸರ್ವೆ ನಂ. 51 ಮತ್ತು 66 ರಲ್ಲಿ ದಾಖಲಾಗಿದೆ ಎಂದರೆ ನಿಜ. ಹಾಗೂ ಶಿರಡಾಣ ಗ್ರಾಮದ ಸರ್ವೆ ನಂ. 39 ರಲ್ಲಿಯು ಸಹ ಆತನ ಹೆಸರು ದಾಖಲಾಗಿದೆ ಎಂದರೆ ನಿಜ. ಮುತ್ತಪ್ಪನ ಮರಣ ಪ್ರಮಾಣ ಪತ್ರ ತೆಗೆಸಿದ್ದೆನೆ. ಮರಣದ ಉತಾರದ ಬಗ್ಗೆ ತಿಳಿದುಕೊಂಡಿದ್ದೆನೆ. ನಿಪಿ 3 ಮರಣ ಪ್ರಮಾಣ ಪತ್ರದಲ್ಲಿ ಲಗಮವ್ವ ಮೊದಲನೆ ಹೆಂಡತಿ ಹಾಗೂ ನಾನು ಎರಡನೇ ಹೆಂಡತಿ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಮುತ್ತಪ್ಪ ಸತ್ತ ನಂತರ ವಾದಿ ತಹಶೀಲ್ದಾರ ಕಚೇರಿಯಲ್ಲಿ ವಾರಸಾ ಪ್ರಮಾಣ ಪತ್ರ ಕೇಳಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಗ್ರಾವು ಲೆಕ್ಕಾಧಿಕಾರಿ ಜಾಂಗಟಿಹಾಳ ಮತ್ತು ಕಂದಾಯ ನೀರಿಕ್ಷಕರು ಹುಕ್ಕೇರಿ ಇವರು ಸ್ಥಳ ಚೌಕಾಶಿ ಗೆ ಬಂದಿದ್ದರು ಎಂದರೆ ಸರಿಯಲ್ಲ. ನಿಪಿ.2 ಸ್ಥಾನಿಕ ಚೌಕಾಶಿ ಮಾಡಿದಾಗ ಲಗಮವ್ ಮೊದಲ ಹೆಂಡತಿ ಹಾಗು ನಾನು ಎರಡನೇ ಹೆಂಡತಿ ಎಂದು ಅಧಿಕಾರಿಗಳು ಉಲ್ಲೆಖಿಸಿದ್ದಾರೆ ಎಂದರೆ ಸರಿಯಲ್ಲ. ಲಕ್ಷ್ಮಿ ಎರಡನೇ ಹೆಂಡತಿ ಮಗಳು ಹಾಗೂ ರಾಘವೆಂದ್ರ ಎರಡೆಯ ಹೆಂಡತಿ ಮಗ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ನಿಪಿ. 9ಆಧಾರ ಕಾರ್ಡ ನಲ್ಲಿ ಲಗಮವ್ವ ಕೊಂ ಮುತ್ತಪ್ಪ ನಾಯ್ಕ ಎಂದು ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಮುತ್ತಪ್ಪ ಸಾಯುವ ತನಕ ಲಗಮವ್ವ ದೇಖರೇಕಿ ಮಾಡಿದ್ದಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ಮುತ್ತಪ್ಪ ಬದುಕಿದ್ದಾಗ ವಾದಿಯನ್ನು ಅವನ ಹೆಂಡತಿ ಎಂದು ಒಪ್ಪಿಕೊಂಡಿಲ್ಲ ಎಂದು ಹೇಳುತ್ತಾರೆ. ಇಲ್ಲಿಯ ತನಕ ವಾದಿಯೇ ದಾವಾ ಜಮೀನನ್ನು ವಹಿವಾಟ ಮಾಡಿಕೊಂಡು ಬಂದಿದ್ದಾಳೆ ಎಂದರೆ ಸರಿಯಲ್ಲ. ವಾದಿಯು ಹಾಜರುಮಾಡಿದ ದಾಖಲೆಗಳು ಕಾಯದೆ

ಪ್ರಕಾರ ಇದೆ ಎಂದರೆ ಸರಿಯಲ್ಲ . ವಾದಿಯು ವಾದ ಪತ್ರದಲ್ಲಿ ಬರೆದ ಸಂಗತಿಗಳು ನಿಜ ಎಂದರೆ ಸರಿಯಲ್ಲ. ಮುತ್ತಪ್ಪನಿಗೆ ನಾನು ಮೊದಲನೆ ಹೆಂಡತಿ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಮಾಡಿದ್ದೆನೆ ಸಾಕ್ಷಿಯು ಮುಂದುವರೆದು ಮುತ್ತಪ್ಪ ಬದುಕಿದ್ದಾಗ ನನ್ನ ಮಕ್ಕಳ ಹೆಸರಿಗೆ ಹೊಲವನ್ನು ಹಚ್ಚಿ ದ್ದಾನೆ ಎಂದು ಹೇಳುತ್ತಾರೆ. ನನ್ನ ಹೆಸರಿಗೂ ಸಹ ಬ್ಯಾಂಕಿನಲ್ಲಿ ಸಾಲ ತೆಗೆಯುವ ಸಲುವಾಗಿ ಹಚ್ಚಿ ದ್ದಾಗಿ ಹೇಳುತ್ತಾರೆ. ನಾನು ಹಾಜರುಮಾಡಿದ ದಾಖಲೆಗಳು ಕೊಟ್ಟಿ ಇರುತ್ತವೆ ಎಂದರೆ ಸರಿಯಲ್ಲ. ನಾನು ಮತ್ತು 2ನೇ ಮತ್ತು 3 ನೇ ಪ್ರತಿವಾದಿಯರು ಮುತ್ತಪ್ಪನ ವಾರಸುದಾರರು ಎಂದರೆ ಸರಿಯಲ್ಲ. ಜಮೀನುಗಳು ನನ್ನ ಕಬ್ಜಾದಲ್ಲಿವೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಮುತ್ತಪ್ಪನಿಗೆ ನಾನು ಕಾಯದೇಶೀರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ನನ್ನ ಮದುವೆ 30 ವರುಷಗಳ ಹಿಂದೆ ಜಾಂಗಟಿಹಾಳದಲ್ಲಿ ಆಗಿರುತ್ತದೆ. ನನ್ನ ಗಂಡನ ಮನೆಯ ಮುಂದೆ ಲಗ್ನ ಆಗಿರುತ್ತದೆ. ನನಗೆ ನಿಖರವಾದ ದಿನಾಂಕ ಗೊತ್ತಿಲ್ಲ. ನನ್ನ ಮೊದಲನೇ ಮಗಳು ಯಾವ ತಾರಿಖಿನಲ್ಲಿ ಹುಟ್ಟಿದ್ದಾಳೆಂದು ನನಗೆ ನೆನಪಿಲ್ಲ ಆದರೆ ದಾಖಲೆಗಳು ಇವೆ . ನನ್ನ ಮದುವೆಯಾದ 2-3 ವರುಷಗಳ ನಂತರ ವಾದಿಯು ನನ್ನ ಗಂಡ ಮುತ್ತಪ್ಪನ ಜೊತೆ ಜಗಳವಾಡಿ ತವರು ಮನೆಗೆ ಹೋಗಿದ್ದಳು . ನನ್ನ ಗಂಡ ಸತ್ತ ನಂತರ ಈಗ ಬಂದಿದ್ದಾಗಿ ಹೇಳುತ್ತಾರೆ. ಲಗಮವ್ವ ನನ್ನ ಅಕ್ಕನ ಮಗಳು, ಅವಳು ಈ ರೀತಿ ಜಗಳ ಮಾಡುತ್ತಾಳೆ ಎಂದು ನನ್ನ ಗಂಡ ನನಗೆ ಹೇಳಿದರು. ವಾದಿಯು ನನ್ನ ಗಂಡನ ಜೊತೆ ಎಷ್ಟು ದಿನ ಜೀವನ ಮಾಡಿದಳು ಎಂದು ನನಗೆ ಗೊತ್ತಿಲ್ಲ ಮದುವೆಯಾದಾಗಿಂದ ನಾನೇ ನನ್ನ ಗಂಡನ ಜೊತೆ ಇದ್ದೆನೆ. ನನ್ನ ಗಂಡ ಬದುಕಿದ್ದಾಗ ವಾದಿ ಜಗಳ ಮಾಡಿದ ಬಗ್ಗೆ ಯಾವುದೇ ಪೋಲಿಸ ಕಂಪ್ಲೆಂಟ ಮಾಡಿಲ್ಲ. ಆಕೆ ತನ್ನ ಅಕ್ಕನ ಮಗಳು ಎಂದು ಸುಮ್ಮನಿದ್ದರು ಎಂದು ಹೇಳುತ್ತಾರೆ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಎಲ್ಲ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಾ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**(ಆದಿತ್ಯ ಆರ್. ಕಲಾಲ್)**
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**